ಮತ್ತಷ್ಟು ತರ್ಕ, ವಾಗ್ವಾದ ನಡೆಯಿತು. ಅಲ್ಲಿವರೆಗೂ ತಾಳ್ಮೆಯಿಂದ ನೋಡುತ್ತ ನಿಂತಿದ್ದ ನಿವೇದಿತಾ ಇನ್ನು ಆಲಿಸಲಾರದವಳಂತೆ ಅಲ್ಲೇ ಕುಸಿದುಬಿದ್ದಳು. ಇದ್ದಕ್ಕಿದ್ದಂತೆ ಉದ್ಭವಿಸಿದ ಹೊಸ ಬಿಕ್ಕಟ್ಟಿಗೆ ಅಲ್ಲಿದ್ದವರೆಲ್ಲ ಸ್ತಬ್ಧರಾದರು. ಪ್ರದೀಪ ಎದ್ದು ಪತ್ನಿಯ ಕಡೆಗೆ ಧಾವಿಸಿದ. ಅವಳನ್ನೆತ್ತಿ ಅವಳ ಕೋಣೆಗೆ ಕರೆದೊಯ್ದು ಮಂಚದ ಮೇಲೆ ಮಲಗಿಸಿದ. ವೀಣಾ ಅಳಲು ಶುರು ಮಾಡಿದರು. 'ಎಲ್ಲರೂ ಸೇರಿ ನನ್ನ ಮಗಳ ಹಿಂದೆ ಬಿದ್ದಿದ್ದಾರೆ. ಅವ್ಳ ಪ್ರಾಣ ತೆಗೆಯದೇ ಸುಮ್ನಿರಲ್ಲ ಅನ್ಸುತ್ತೆ'.

ಪ್ರದೀಪ ಪ್ರಜ್ಞಾಶೂನ್ಯಳಾಗಿದ್ದ ಪತ್ನಿಯ ಕೆನ್ನೆ ಲಘುವಾಗಿ ತಟ್ಟಿ ಎಬ್ಬಿಸುವ ಯತ್ನ ನಡೆಸಿದ. ಅಲ್ಲೇ ಇದ್ದ ನೀರಿನ ಜಗ್‌ನಿಂದ ನೀರು ಕೈಮೇಲೆ ಹಾಕಿಕೊಂಡು ಅವಳ ಮುಖದ ಮೇಲೆ ಸಿಂಪಡಿಸಿದ. ನಿವೇದಿತಾ ಮೆಲ್ಲನೆ ಕಣ್ಣು ಬಿಟ್ಟಾಗ ಎಲ್ಲರಿಗೂ ಹೋದ ಪ್ರಾಣ ಮರಳಿ ಬಂದಂತಾಗಿತ್ತು. ವೀಣಾ ಆತಂಕದಿಂದ ಮಗಳನ್ನು ವಿಚಾರಿಸಿದರು, 'ಏನಾಯಿತೇ? ಉಷಾರಿದ್ದೀ ತಾನೇ? ಆಸ್ಪತ್ರೆಗೆ ಹೋಗೋಣ್ವಾ?'

'ಬೇಡ. ಸರಿ ಇದೀನಿ...' ಎಂದು ಎದ್ದು ಮಂಚಕ್ಕೆ ಬೆನ್ನು ಒರಗಿಸಿ ಕುಳಿತು ಮುಖ ಮುಚ್ಚಿಕೊಂಡು ಬಿಕ್ಕಳಿಸತೊಡಗಿದಳು. ನಿವೇದಿತಾಳ ಅಳು ಕಂಡು ಪ್ರದೀಪ ಆರ್ದ್ರವಾಗಿ ಕರಗಿಹೋದ.

ಅವನು ಮೆಲುದನಿಯಲ್ಲಿ, 'ಸಾರಿ ನಿವೀ, ಪ್ಲೀಸ್ ಅಳ್ಬೇಡ...' ಸಂತೈಸಿದ. ನಿವೇದಿತಾ ಅಳುತ್ತಲೇ ಇದ್ದಳು. ಕೇಶವರು ಅವರಿಬ್ಬರಿಗೂ ಏಕಾಂತ ಕಲ್ಪಿಸುವ ಸಲುವಾಗಿ ಪತ್ನಿಗೆ ಸನ್ನೆ ಮಾಡಿ ಹೊರಗೆ ಕರೆದೊಯ್ದಾಗ ಅಲ್ಲಿ ದಂಪತಿ ಮಾತ್ರ ಉಳಿದರು. ನಿಧಿ ತೊಟ್ಟಿಲಲ್ಲಿ ಹಾಯಾಗಿ ಮಲಗಿದ್ದಳು.

'ನಿವೀ ಅಳ್ಬೇಡ ಪ್ಲೀಸ್, ಸಾರಿ... ನಿನ್ನ ಮನಸ್ಸು ನೋಯಿಸಿದ್ರೆ...'

ಅವನ ಮನವೊಲಿಕೆಗೆ ಅವಳು ತನ್ನನ್ನು ನಿಯಂತ್ರಿಸಿಕೊಳ್ಳುತ್ತ, 'ಮತ್ತೆ ಇಂಥ ಆರೋಪ ನೀವು ನನ್ಮೇಲೆ ಮಾಡಿದ್ರೆ ನಾನು ಏನು ಮಾಡಲಿ? ನೀವೇ ನನ್ನ ನಂಬದಿದ್ದರೆ ನಾನು ಎಲ್ಲಿಗೆ ಹೋಗಲಿ? ನಾನು ಹೆತ್ತ ಮಗು ಪ್ರಾಣಕ್ಕೆ ನಾನ್ಯಾಕೆ ಸಂಚಕಾರ ತರಲಿ? ಅದು ನಾನು ಹೆತ್ತ ಮಗೂರಿ...'

'ನಿವೀ... ನಿನಗೆ ಆ ಘಟನೆ ಹೇಗೆ ಹೇಳಲಿ? ನಿನ್ಗೆ ನೆನಪಿಲ್ಲವೇ? ಆವತ್ತು...?' ಅವನ ಕಣ್ಮುಂದೆ ಅಂದಿನ ಘಟನೆ ನೆನಪಾಗಿ ಅವನ ಮೈ ಕಂಪಿಸಿತು. ನೆನೆಸಿಕೊಳ್ಳಲೇ ಹಿಂಜರಿಯುವಂಥ ಘಟನೆ ಆಗಿತ್ತದು. ಇನ್ನೂ ಆ ದೃಶ್ಯ ಕಣ್ಮುಂದೆ ಕಟ್ಟಿಟ್ಟಂತಿತ್ತು. ಪ್ರದೀಪ ಅಚಾನಕ್ಕಾಗಿ, ಹೇಳದೇ ಕಚೇರಿಯಿಂದ ಮನೆಗೆ ಬಂದಿದ್ದ. ಪತ್ನಿಗೆ ಅನಿರೀಕ್ಷಿತ ಖುಷಿ ಕೊಡುವ ಉದ್ದೇಶದಿಂದ ಬೇಗನೇ ಆಗಮಿಸಿದ್ದ. ಸದ್ದು ಮಾಡದೇ ತನ್ನ ಕೋಣೆಗೆ ಬಂದಾಗ ಅಲ್ಲಿ ಕಂಡ ಘಟನೆ ಅವನ ಮೈ ನಡುಗಿ ರಕ್ತ ಹೆಪ್ಪುಗಟ್ಟುವಂತಾಗಿತ್ತು. ಮಂಚದ ಮೇಲೆ ನಿಧಿ ಮಲಗಿ ಕೈಕಾಲು ಕೊಸರಿ ಒದ್ದಾಡುತ್ತಿದ್ದಳು. ಕಾರಣ ನಿವೇದಿತಾ, ಆ ಮಗುವಿನ ತಾಯಿ ಮಗುವಿನ ಮೂಗನ್ನು ಉಸಿರಾಡದಂತೆ ತನ್ನ ಬೆರಳುಗಳಿಂದ ಬಿಗಿ ಹಿಡಿದಿದ್ದಳು. ನಿಧಿಯ ಮೈಯೆಲ್ಲಾ ಕೆಂಪೇರಿತ್ತು. ಪ್ರಾಣವಾಯುವಿಗೆ ತಹತಹಿಸುವಂತೆ ಅದು ಚೀರಲು ಯತ್ನಿಸಿದರೂ ಆಗದೇ ವಿಲವಿಲನೇ ಒದ್ದಾಡುತ್ತಿತ್ತು. ನಿವೇದಿತಾಳ ಕಂಗಳಲ್ಲಿ ಏನೋ ವಿಲಕ್ಷಣ ಭಾವ. ಕಂಗಳಲ್ಲಿ ಕ್ರೌರ್ಯ ಎದ್ದು ಕಾಣುತ್ತಿತ್ತು.

ಒಂದು ಕ್ಷಣ ತಾನು ನೋಡುತ್ತಿರುವುದು ಕನಸೋ ವಾಸ್ತವವೋ ತಿಳಿಯದ ದಿಗ್ಭ್ರಾಂತ ಸ್ಥಿತಿಯಲ್ಲಿ ನಿಂತಿದ್ದ ಪ್ರದೀಪ. ಮರುಕ್ಷಣವೇ ಅರಚಿದ, 'ನಿವೇದಿತಾ' ಎಂದವನೇ ಧಾವಿಸಿದವನು, ನಿಧಿಯ ಮೂಗು ಹಿಡಿದಿದ್ದ ನಿವೇದಿತಾಳ ಕೈಯನ್ನು ದೂಡಿದವನು ನಿಧಿಯನ್ನು ಎತ್ತಿ ಬೆನ್ನಿಗೆ ಹಾಕಿಕೊಂಡ. ನಿಧಿ ಒಂದೇ ಸಮನೆ ಚೀರತೊಡಗಿದಳು. ಅದರ ಮೈಯೆಲ್ಲಾ ಕೆಂಪೇರಿ ಹೋಗಿತ್ತು. ನಿವೇದಿತಾ ವಾಸ್ತವಕ್ಕೆ ಬಂದವಳಂತೆ ಎದ್ದು ಬಂದಾಗ ಅರವಿಂದ ಅವಳೆಡೆಗೆ ತಿರಸ್ಕಾರದಿಂದ ನೋಡಿದವನು ಅಲ್ಲಿ ನಿಲ್ಲದೆ ಮಗುವನ್ನೆತ್ತಿಕೊಂಡು ಹೊರ ನಡೆದಿದ್ದ. ಅಚ್ಚರಿ ಕೊಡಲು ಬಂದವನಿಗೆ ದೊಡ್ಡ ಆಘಾತ ಕಾದಿತ್ತು. ಒಂದು ನಿಮಿಷ ತಡವಾಗಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು! ಇದು ದುಸ್ವಪ್ನವೇ ಆಗಿರಲಿ ತಂದೆ! ಮಗು ಸಹಜ ಸ್ಥಿತಿಗೆ ಮರಳುವ ತನಕ ಅವನ ಜೀವ ತುಯ್ದಾಡುತ್ತಿತ್ತು. ಹೊರಗೆ ಹೂದೋಟಕ್ಕೆ ಕರೆದೊಯ್ದು ಗಾಳಿ ಆಡಿಸಿ ಸಂತೈಸಿದಾಗ ನಿಧಿ ಸಹಜ ಸ್ಥಿತಿಗೆ ಮರಳಿದ್ದಳು. ಪತ್ನಿಯ ವಿಲಕ್ಷಣ ವರ್ತನೆ, ಆ ಘಟನೆ ಅವನನ್ನು ಕಂಗೆಡಿಸುವಂತೆ ಮಾಡಿತ್ತು. ಕೂಡಲೇ ನಿವೇದಿತಾಳ ಹೆತ್ತವರಿಗೆ ಬರಲು ಹೇಳಿ ಕರೆ ಮಾಡಿದ್ದ.

'ನೀವೇನು ಹೇಳ್ತಿದೀರೋ ನನ್ಗೆ ಗೊತ್ತಿಲ್ಲ? ನಾನ್ಯಾಕೆ ನನ್ನ ಮಗೂಗೆ ತೊಂದರೆ ಕೊಡಲಿ?'

ನಿವೇದಿತಾ ಎದ್ದು, ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನೆತ್ತಿಕೊಂಡು ಬಂದು ಅವನ ಮುಂದೆ ಹಿಡಿದು ಕಂಬನಿಗರೆದಳು.

'ಅವಳಿಗೆ ಏನಾದರೂ ಆದರೆ ನಾನು ಬದುಕಿರ್ತೀನಾ ಹೇಳಿ? ನಮ್ಮಿಬ್ಬರ ಪ್ರೀತಿಯ ದ್ಯೋತಕವಾಗಿರುವ ಮಗು, ನಮ್ಮ ಬಾಳಿನ ನಿಧಿ ಅವ್ಳು...' ಪ್ರದೀಪ ಮಾತು ಮರೆತವನಂತೆ ಅವಳ ಮುಖ ದಿಟ್ಟಿಸಿದ.

ಈ ಪ್ರೀತಿ, ಮಮತೆ, ಈ ಕಂಬನಿ... ಎಲ್ಲಾ ಸುಳ್ಳೇ, ಕಪಟವೇ? ತನ್ನ ಕಣ್ಣು ಮೋಸ ಮಾಡುತ್ತಿದೆಯೇ ಅಥವಾ ತನ್ನ ಹೃದಯವೇ?

ಹಾಗಾದರೆ ಅಂದು ತಾನು ನೋಡಿದ ಘಟನೆ! ನಿನ್ನೆ ಪುನರಾವರ್ತನೆ ಆದ ಘಟನೆ! ಏನಿದು...? ಯಾಕೆ ಹೀಗೆ ಆಗುತ್ತಿದೆ...? ಕೃತ್ತಿಕಾ ತನಗೆ ಯಾವ ಸೂಚನೆ ನೀಡಿದ್ದಳು? ಅವಳ ಮಾತಿನ ಉದ್ದೇಶ ಏನಿತ್ತು? ನಿವೇದಿತಾಳಿಗೆ ತಾನೇನು ಮಾಡುತ್ತಿರುವೆನೆಂಬ ಪ್ರಜ್ಞೆ ಇಲ್ಲವೇ...?' ಪ್ರದೀಪ ತದೇಕಚಿತ್ತದಿಂದ ಅವಳ ಚಲನವಲನಗಳ ಮೇಲೆ ನಿಗಾ ಇರಿಸುವವನಂತೆ ಕುಳಿತ. ನಿವೇದಿತಾ ಮಗುವನ್ನು ಬಿಟ್ಟಿರಲಾರದವಳಂತೆ ಭದ್ರವಾಗಿ ಹಿಡಿದಿದ್ದಳು. ಅವಳ ಕಂಗಳಿಂದ ಜಾರಿದ ಕಂಬನಿ ಕೆನ್ನೆಯ ಮೇಲೆ ಇನ್ನೂ ಹಸಿಯಾಗಿತ್ತು. ಅದರಲ್ಲಿ ಅವನಿಗೆ ಯಾವ ಕಲ್ಮಶವೂ ಕಾಣಲಿಲ್ಲ.

'ನಿನಗೆ ಯಾವ ನೆನಪೂ ಇಲ್ಲವೇ..?' ಮತ್ತೆ ಒತ್ತಿ ಕೇಳಿದ.

ನಿವೇದಿತಾ ಅಡ್ಡಡ್ಡ ತಲೆ ಆಡಿಸಿದಳು, 'ಇಲ್ಲ...' ಸಮಸ್ಯೆ ತಾನೆಣಿಸುವಷ್ಟು ಸುಲಭವಾಗಿಲ್ಲವೆಂದು ಅವನಿಗೆ ತೋರಿತು. ಅವನ ಹಣೆಯ ಮೇಲೆ ಚಿಂತೆಯ ಗೆರೆಗಳು ದಟ್ಟವಾಗಿ ಮೂಡಿದವು. ವೀಣಾ ಅವನನ್ನು ಊಟಕ್ಕೆ ಕರೆದರು. ಕೇಶವರು ಮಗುವನ್ನೆತ್ತಿಕೊಂಡರೆ, ನಿವೇದಿತಾ ಪ್ರದೀಪನ ಉಪಚಾರಕ್ಕೆ ನಿಂತಳು. ಪ್ರದೀಪನ ಗಂಟಲಲ್ಲಿ ಒಂದು ತುತ್ತೂ ಇಳಿಯದಾಯಿತು. ಪ್ರೀತಿಯಿಂದ ಬಡಿಸುವಲ್ಲಿ ನಿರತಳಾದ ಪತ್ನಿಯ ಮುಖದಲ್ಲಿದ್ದ ಸೌಮ್ಯ ಭಾವ ಒಂದೆಡೆ, ಮತ್ತೊಂಡೆಡೆ ತಾನು ಕಂಡ ಆ ರೌದ್ರ ರೂಪ! ಅಸಲಿ ಮುಖ ಯಾವುದು, ಯಾವುದು ಮುಖವಾಡ...? ತಾನು ಮೆಚ್ಚಿದ್ದು, ಒಲಿದದ್ದು ಆ ರೂಪಕ್ಕೆ, ಸ್ನೇಹ ಭಾವಕ್ಕೆ, ಅವಳನ್ನು ಒಂದು ಕ್ಷಣವೂ ಬಿಟ್ಟಿರಲಾರದಷ್ಟು ತಾನು ಹಚ್ಚಿಕೊಂಡಿದ್ದೆ. ಅವಳು ಸದಾ ತನ್ನೊಂದಿಗೆ ಇರಬೇಕೆಂದು ಪರಿತಪಿಸುತ್ತಿದ್ದೆ. ಅವಳೂ ತನಗೆ ತುಂಬು ಪ್ರೀತಿ ನೀಡಿದ್ದಳು. ತನ್ನ ಪ್ರೀತಿಯ ಕಾಣಿಕೆಯಾಗಿ ಮುದ್ದಾದ ಮಗಳನ್ನು ತನಗೆ ಉಡುಗೊರೆಯಾಗಿ ನೀಡಿದ್ದಳು. ತನ್ನಿಡೀ ಜೀವಮಾನದ ಆರ್ಥಿಕ ಸಂಪಾದನೆಗಿಂತಲೂ ನಿಧಿ ತನ್ನ ಪಾಲಿಗೆ ಭಗವಂತ ನೀಡಿದ ಅನರ್ಘ್ಯ ಕೊಡುಗೆಯಾಗಿತ್ತು.

ನಿಧಿ ಬಂದ ಬಳಿಕ ತಮ್ಮ ಬದುಕಲ್ಲಿ ಪರಿಪೂರ್ಣತೆ ಬಂದಿದೆ ಎನಿಸಿತ್ತು. ಅದು ನಿವಿಯ ಮೂಲಕ ತನಗೆ ಲಭಿಸಿತ್ತು. ಇಬ್ಬರೂ ತನಗೆ ಎರಡು ಕಣ್ಣುಗಳಂತಾಗಿದ್ದರು. ಪ್ರಾಣಕ್ಕಿಂತಲೂ ಅಮೂಲ್ಯವಾದ ಆ ಕಂದನ ಪ್ರಾಣಕ್ಕೆ ತಾಯಿಯಿಂದಲೇ ಸಂಚಕಾರ ಬಂದರೆ ತಾನು ಹೇಗೆ ಸಹಿಸಲಿ? ಏನು ಮಾಡಲಿ? ಪ್ರದೀಪನ ಚಿಂತೆಯ ಕಾರಣ ಕೇಶವರಿಗೆ ಅರ್ಥವಾಗಿತ್ತು. ಅವರೂ ಅವನಿಗೆ ಸಾಂತ್ವನ ಹೇಳುವ ಸ್ಥಿತಿಯಲ್ಲಿರಲಿಲ್ಲ. ಪತಿ ಪತ್ನಿಯರಿಬ್ಬರೇ ಮಾತನಾಡಿಕೊಂಡು ಒಂದು ಇತ್ಯರ್ಥಕ್ಕೆ ಬರಲಿ ಎನ್ನುವುದು ಅವರ ಉದ್ದೇಶವಾಗಿತ್ತು. ನಿವೇದಿತಾ ಕೂಡಾ ಅವನೊಂದಿಗೆ ಉಂಡ ಶಾಸ್ತ್ರ ಮಾಡಿ ಎದ್ದಳು. ಕೋಣೆಗೆ ಬಂದ ಬಳಿಕ, 'ಈಗಲೇ ಹೋಗ್ಬೇಡಿ... ಸಂಜೆ ಹೋಗಿ...' ಎಂದು ಅವನನ್ನು ಬಳಸಿ ಹಿಡಿದು ನುಡಿದಳು. ಅವಳ ಕಂಗಳಲ್ಲಿ ಆಹ್ವಾನವಿತ್ತು. ಬಯಕೆ ವ್ಯಕ್ತಪಡಿಸುತ್ತ ತಡೆದಳು. ಅವನಿಗೆ ಕಚೇರಿಯಲ್ಲಿ ಬಹಳಷ್ಟು ಕೆಲಸವಿತ್ತು. ಅವನ ಮೊಬೈಲ್ ಸದ್ದು ಮಾಡುತ್ತಲೇ ಇತ್ತು. ಅದರ ಧ್ವನಿಯನ್ನು ಅವನು ನಿಷ್ಕ್ರಿಯಗೊಳಿಸಿದ್ದ. ಆದರೂ ಅದು ಕಂಪಿಸುವುದರ ಸದ್ದು ನಿವೇದಿತಾಳಿಗೆ ಅರಿವಾಗುತ್ತಿತ್ತು. ಅಲ್ಲಿಯ ತನ್ನ ಪ್ರಸ್ತುತತೆಯ ಅವಶ್ಯಕತೆಗಿಂತಲೂ ಇಲ್ಲಿನ ವಿಷಮ ಸ್ಥಿತಿ ಬಿಟ್ಟು ಹೋಗುವ ಸಾಹಸ ಅವನಿಂದ ಮಾಡಲಾಗಿರಲಿಲ್ಲ. ಸೌಮ್ಯವಾಗಿರುವ ಪತ್ನಿಯ ಅಸಲಿ ಮುಖ ಯಾವಾಗ ಕರಾಳತೆಗೆ ಬದಲಾಗಬಹುದೋ ಎಂಬ ಭಯ ಅವನನ್ನು ಹೋಗದಂತೆ, ಇಲ್ಲೇ ತಡೆ ಹಿಡಿದಿತ್ತು. ಅವಳ ಇಚ್ಛೆಯನ್ನು ತಳ್ಳಿ ಹಾಕದಾದ. ನಿಧಿ ಹುಟ್ಟಿದ ನಂತರ ಆದ್ಯತೆಗಳು ಬದಲಾಗಿದ್ದವು. ಅವಳ ಸಾಮೀಪ್ಯದ ಬಯಕೆ ಕಾಡಿದರೂ ನಿಧಿಗೆ ತಾಯಿಯ ಅವಶ್ಯಕತೆ ಕ್ಷಣಕ್ಷಣಕ್ಕೆ ಬೇಕಾಗುತ್ತಿದ್ದರಿಂದ ಅದನ್ನು ಅರಿತು